**ದಿನಾಂಕ: 19-09-2025ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 1 ರಿಂದ 3, 6 ಮತ್ತು 7ನೇ ಪ್ರತಿವಾದಿ ಪರ ಪಿ.ಪಿ.ಕೆ. ವಕೀಲರಿಂದ**

3. ದಾವಾ ಆಸ್ತಿಗಳು ಸ.ನಂ.126 ಮೊದಲು 1968ನೇ ಇಸವಿಯಲ್ಲಿ ಯಾರ ಹೆಸರಿನಲ್ಲಿ ಇತ್ತು ಎಂದರೆ ಕಮಲಾಬಾಯಿಯವರ ತಂದೆಯ ಹೆಸರಿನಲ್ಲಿತ್ತು. ಸ.ನಂ.126 1968ನೇ ಇಸವಿಯಲ್ಲಿ ಮಲ್ಕಪ್ಪ ತಂದೆ ಗೌಡಪ್ಪನ ಹೆಸರಿನಲ್ಲಿತ್ತು ಎಂದರೆ ಸರಿ. ಸ.ನಂ.126 ಯಾವ ಆಧಾರದ ಮೇಲೆ ಅಪ್ಪಾರಾಯರವರಿಗೆ ಬಂದಿದೆ ಎಂದು ನಿಮ್ಮ ದಾವೆಯಲ್ಲಿ ಬರೆದಿಲ್ಲ ಎಂದರೆ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ಅಪ್ಪಾರಾಯ ತಂದೆ ಬಸಪ್ಪರವರು ಮೂಲತಃ ಕಿರಣಗಿಯವರು ಎಂದರೆ ಸರಿ. ಅಪ್ಪಾರಾಯರವರು ಬಂದು ಕಿರಣಗಿಯಲ್ಲಿ ನೆಲೆಸಿದ್ದರು ಎಂದರೆ ಅಪ್ಪಾರಾಯರವರ ತಂದೆಯವರು ಬಂದು ನೆಲೆಸಿದ್ದರು ಎಂದು ಉತ್ತರಿಸುತ್ತಾರೆ. ಬಸಪ್ಪರ ಕಿರಣಗಿಯವರು ಯಾವುದಾದರೂ ಜಮೀನುಗಳನ್ನು ಖರೀದಿ ಮಾಡಿರುವ ದಾಖಲಾತಿಗಳನ್ನು ನೋಡಿದ್ದೀರಾ ಎಂದರೆ ನೋಡಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ-1 ರಿಂದ 67 ರಲ್ಲಿ ಪಾಲು ಆಗಿ ವಿಭಾಗ ಆಗಿದೆ ಎಂದು ಬರೆದಿದ್ದಾರೆ ಎಂದರೆ ವಿಭಾಗ ಮಾಡಿಕೊಂಡಿಲ್ಲ ಪಹಣಿ ಒಬ್ಬೊಬ್ಬರ ಹೆಸರಿನಲ್ಲಿ ಇದೆ ಎಂದು ಉತ್ತರಿಸುತ್ತಾರೆ. ವಿಭಾಗ ಆಗಿರುವ ಬಗ್ಗೆ ಎಲ್ಲಿಯಾದರೂ ತಕರಾರು ಮಾಡಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.

4. ನಿಮ್ಮ ದಾವೆಯ ಪ್ಯಾರಾ-4 ರಲ್ಲಿ ಎಲ್ಲಾ ಆಸ್ತಿಗಳು ಪ್ರತಿವಾದಿಗಳ ಹೆಸರಿನಲ್ಲಿ ಇವೆ ಎಂದು ಬರೆದಿದ್ದೀರಿ ಎಂದರೆ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ದಾವೆಯಲ್ಲಿ ಎಲ್ಲಿಯೂ ಸಹ ನೀವು ನಾಮಿನಲ್ ಎಂಟ್ರಿ ಇದೆ ಬರೆದಿಲ್ಲ ಎಂದರೆ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ಪ್ರೇಮನಗೌಡನ ಹೆಸರಿನಲ್ಲಿ ಇದ್ದ ಜಮೀನು 2018-19ರಲ್ಲಿ 1 ಎಕರೆ 26 ಗುಂಟೆ ಜಮೀನು ಯು.ಕೆ.ಪಿ.ಗೆ ಹೋಗಿದೆ ಎಂದರೆ ಸರಿ. ಇದರ ಪರಿಹಾರ ಹಣ ಸಹ

ಪ್ರೇಮಕುಮಾರ ತೆಗೆದುಕೊಂಡಿದ್ದಾರೆ ಎಂದರೆ ಸರಿ. ನಿಮ್ಮ ದಾವೆಯಲ್ಲಿ ಸದರಿ ಪರಿಹಾರ ಹಣದ ಬಗ್ಗೆ ಎಲ್ಲಿಯೂ ತಕರಾರು ಮಾಡಿಲ್ಲ ಎಂದರೆ ಸರಿ.

5. ನೀವು ತೋರಿಸಿದಂತಹ ವಂಶಾವಳಿಯ ಪ್ರಕಾರ ಸರಕಾರಿ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಅಪ್ಪಾರಾಯ ತೀರಿಕೊಂಡ ನಂತರ ನಿಮ್ಮ ತಾಯಿ ಜೀವಂತ ಇರುವವರೆಗೆ ನೀವು ವಾರಸುದಾರರು ಇದ್ದೀರಿ ಅದರಲ್ಲಿ ಹೆಸರು ಸೇರ್ಪಡೆ ಮಾಡಬೇಕು ಎಂದು ಅರ್ಜಿ ಏನಾದರೂ ಕೊಟ್ಟಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ಜೀವಂತ ಇರುವವರೆಗೆ ಕಂದಾಯ ವರ್ಗಾವಣೆಗಳ ಬಗ್ಗೆ ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಕಂದಾಯ ಅಧಿಕಾರಿಗಳು ದಾಖಲಾತಿಗಳನ್ನು ನಿಮ್ಮ ಬೆನ್ನಿನ ಹಿಂದೆ ಮಾಡಿದ್ದಾರೆ ಅದು ನಿಮಗೆ ಬಂಧನಕಾರಿ ಆಗುವುದಿಲ್ಲ ಎಂದು ನಿಮ್ಮ ದಾವೆಯಲ್ಲಿ ಪರಿಹಾರ ಕೇಳಿಲ್ಲ ಎಂದರೆ ಕೇಳಿಲ್ಲ ಎಂದು ಉತ್ತರಿಸುತ್ತಾರೆ.

6. ಅಪ್ಪಾರಾಯ ಯಾವಾಗ ತೀರಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಅಪ್ಪಾರಾಯರವರು 2000ನೇ ಇಸವಿಯಲ್ಲಿ ತೀರಿಕೊಂಡಿದ್ದಾರೆ ಎಂದರೆ ನಾನು 2000ನೇ ಇಸವಿಯಲ್ಲಿ ಹುಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. 2000ನೇ ಇಸವಿಯಲ್ಲಿ ನಿಮ್ಮ ತಾಯಿ ದಾವಾ ಆಸ್ತಿ ಮುಟೇಷನ್ ಪ್ರಶ್ನೆ ಮಾಡುವ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ಅಪ್ಪಾರಾಯ ತೀರಿಕೊಂಡ ನಂತರ 2022ನೇ ಇಸವಿವರೆಗೆ ದಾವೆ ಯಾವ ಕಾರಣಕ್ಕೆ ಹಾಕಿಲ್ಲ ಎಂದು ನಿಮ್ಮ ದಾವೆಯಲ್ಲಿ ಕಾರಣ ಬರೆದಿಲ್ಲ ಎಂದರೆ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ಅಪ್ಪಾರಾಯರವರ ಕುಟುಂಬಕ್ಕೆ ಸಂಬಂಧಿಸಿದವರು ಎಂದು ತೋರಿಸಲು ರೇಷನ್ ಕಾರ್ಡ್ , ಅಲ್ಲಿ ವಾಸ ಇದ್ದ ಬಗ್ಗೆ ಓಟರ್ ಲಿಸ್ಟ್ ಹಾಕಿಲ್ಲ ಎಂದರೆ ಹಾಕಿಲ್ಲ ಎಂದು ಉತ್ತರಿಸುತ್ತಾರೆ. ಅಪ್ಪಾರಾಯರಿಗೆ ಮತ್ತು ಗಂಗಮ್ಮರವರನ್ನು ಮದುವೆ ಮಾಡಿಕೊಟ್ಟಿದ್ದಕ್ಕೆ ಯಾವುದೇ ದಾಖಲೆ ಹಾಕಿಲ್ಲ ಎಂದರೆ

ಹಾಕಿಲ್ಲ ಎಂದು ಉತ್ತರಿಸುತ್ತಾರೆ. ಅಪ್ಪಾರಾಯರವರ ಮನೆತನಕ್ಕೆ ನಿಮ್ಮ ತಾಯಿ ಹುಟ್ಟಿದ್ದಾರೆ ಎಂದು ತೋರಿಸಲು ಜನ್ಮ ಪ್ರಮಾಣ ಪತ್ರ ಹಾಕಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಾಯಿ ಶಾಲೆ ಓದಿಲ್ಲ. ಅಪ್ಪರಾಯನ ವಾರಸುದಾರರು ಯಾರು ಇದ್ದರೋ ಅವರು ಮುಟೇಷನ್ ಮಾಡಿಕೊಂಡಿದ್ದಾರೆ ಎಂದರೆ ಮಾಡಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿ ಜಂಟಿ ಕುಟುಂಬದ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಹೌದು ಎಂದು ಉತ್ತರಿಸುತ್ತಾರೆ. ದಾವಾದ ಆಸ್ತಿ ತಲೆಮಾರಿನಿಂದ ಬಂದಿದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಮತ್ತು ಅದು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಪಿತ್ರಾರ್ಜಿತ ಆಸ್ತಿ ಆದರೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ಅಪ್ಪಾರಾಯರವರ ಮನೆತನಕ್ಕೆ ಸಂಬಂಧ ಇಲ್ಲದೇ ಇದ್ದರೂ ಸಹ ನೀವು ಮತ್ತು ನಿಮ್ಮ ತಂದೆ ಸೇರಿ ನಿಮ್ಮ ತಾಯಿಯಿಂದ ಈ ದಾವೆಯನ್ನು ಹಾಕಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಈ ದಾವೆಯನ್ನು ಹಾಕಲು ನಿಮಗಾಗಲೀ ನಿಮ್ಮ ತಾಯಿಗಾಗಲೀ ಯಾವುದೇ ಅಧಿಕಾರ ಇಲ್ಲದಿದ್ದರು ಸಹ ಈ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ